ಮಂಗಳೂರಿನ ತಾಲ್ಲೂಕಿನ ಕಾಟಪಳ್ಳಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಹಾಗೂ ದಿ॥ ಲಾಲ್ ಬಹದ್ದೂರ್ ಶಾಸ್ತ್ರಿ ಸ್ಮಾರಕ ಸರಕಾರಿ ಶಾಲೆಯ ನಿರ್ಮಾಣ

೭೪೭. ಶ್ರೀ ಆಡ್ಯಂತಾಯ (ಸೂರತ್‌ಕಲ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಮಂಗಳೂರು ತಾಲ್ಲೂಕು ಕಾಟಪಳ್ಳಿ ೭ನೇ ಬ್ಲಾಕ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಖ್ಯೆ ಎಷ್ಟು?

ಆ) ಕಾಟಪಳ್ಳಿ ೭ನೇ ಬ್ಲಾಕ್ ದಿ ಲಾಲ್‌ಬಹದ್ದೂರ್ ಶಾಸ್ತ್ರಿ ಸ್ಮಾರಕ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣದ ಕಾರ್ಯ ಸಂಪೂರ್ಣವಾಗಿದೆಯೇ?

ಇ) ಕಾಟಪಳ್ಳಿ ೭ನೇ ಬ್ಲಾಕ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿರುವ ಶಿಕ್ಷಕರ ಕೊರತೆ ಮತ್ತು ವಿದ್ಯಾರ್ಥಿಗಳಿಗಿರುವ ಸ್ಥಳಾವಕಾಶದ ಕೊರತೆಯನ್ನು ನಿವಾರಿಸಲು ಶಿಕ್ಷಣ ಇಲಾಖೆ ಕೈಗೊಂಡ ಕ್ರಮ ಏನು?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ವಿದ್ಯಾರ್ಥಿಗಳ ಸಂಖ್ಯೆ —೭೫೯

ಉಪಾಧ್ಯಾಯರ ಸಂಖ್ಯೆ —೧೦+೧=೧೧

(ಒಬ್ಬ ಉಪಾಧ್ಯಾಯರನ್ನು ಬೇರೆ ಶಾಲೆಯಿಂದ ನಿಯೋಜನೆ ಮೇಲೆ ತುಂಬಿದೆ).

ಆ) ಹೌದು.

ಇ) ಜಿಲ್ಲಾ ನೇಮಕಾತಿಯ ಸಮಿತಿಯ ಮೂಲಕ ಆದಷ್ಟು ಜಾಗ್ರತೆ ತುಂಬಲಾಗುವುದು. ೧೯೮೭-೮೮ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿರುವ ಹಣದಲ್ಲಿ ಈ ಶಾಲೆಗೆ ಆದ್ಯತೆಯ ಮೇಲೆ ಅಧಿಕ ಕೊಠಡಿಗಳನ್ನು ನಿರ್ಮಿಸಲು ಇಲಾಖೆಗೆ ತಿಳಿಸಲಾಗುವುದು.

ಶ್ರೀ ಎನ್. ಎಂ. ಆಡ್ಯಂತಾಯ.— ಮಾನ್ಯ ಅಧ್ಯಕ್ಷರೆ, ಕಾಟಪಳ್ಳಿ ವಠಾರಕ್ಕೆ ಅಥರದೇ ಆದ ಒಂದು ವಿಶೇಷತೆ ಇದೆ. ಇಲ್ಲಿರುವಂಥ ಲಾಲ್‌ಬಹದ್ದೂರ್ ಶಾಸ್ತ್ರಿ ಸ್ಮಾರಕ ಸರ್ಕಾರೀ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕೇಂದ್ರ ಸರ್ಕಾರದಿಂದ ತುಂಬಾ ಹಣ ಬರುತ್ತಿದೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿರುವಂತೆ ೭೫೯ ವಿದ್ಯಾರ್ಥಿಗಳು ಇದ್ದಾರೆ. ಈ ಶಾಲೆಯಲ್ಲಿ ೧೧ ಜನ ಶಿಕ್ಷಕರು ಇದ್ದು, ಎರಡು ಜನ ಉರ್ದು ಟೀಚರ್ಸ್‌ಗಳನ್ನು ಬೇರೆ ಕಡೆ ಒ.ಓ.ಡಿ. ಮೇಲೆ ಕಳುಹಿಸಿದ್ದಾರೆ. ೭೫೯ ಮಕ್ಕಳಿಗೆ ೯ ಜನ ಉಪಾಧ್ಯಾಯರಿದ್ದಾರೆಂದು ಅಲ್ಲಿ ಯಾವ ರೀತಿಯಲ್ಲಿ ಪಾಠ ಪ್ರವಚನಗಳು ನಡೆಯುತ್ತವೆ?

ಅಧ್ಯಕ್ಷರು.— ತಮಗೆ ಏನಾಗಬೇಕು ಅದನ್ನು ಕೇಳಿ?

ಶ್ರೀ ಎನ್. ಎಂ. ಆಡ್ಯಂತಾಯ.— ಕೂಡಲೇ ಸರ್ಕಾರ ಮಲತಾಯಿ ಧೋರಣೆ ಬಿಟ್ಟು ಅಧ್ಯಾಪಕರುಗಳನ್ನು ನೇಮಕ ಮಾಡಬೇಕು. ಅಲ್ಲಿಯ ಶಾಲಾಕಟ್ಟಡ ಮುರಿದು ೧೫ ವರ್ಷಗಳಾದರೂ ವಿದ್ಯಾ ಇಲಾಖೆ ತನ್ನ ವಶಕ್ಕೆ ಏತಕ್ಕೆ ತೆಗೆದುಕೊಂಡಿಲ್ಲ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು?

ಅಧ್ಯಕ್ಷರು.— ತಾವು ಈ ರೀತಿ ಕೇಳುತ್ತಾ ಹೋದರೆ, ಕೊನೆಯ ಪ್ರಶ್ನೆಗಳು ಅಪ್ರಸ್ತುತ ಆಗುತ್ತವೆ,

ಶ್ರೀ ಡಿ. ಮಂಜುನಾಥ್.— ಸ್ವಾಮಿ ಶಿಕ್ಷಕರ ಕೊರತೆ ಇದೆ ಎನ್ನುವುದನ್ನು ನಾನು ಒಪ್ಪಿಕೊಂಡಿದ್ದೇನೆ. ಕಳೆದ ನವೆಂಬರ್‌ನಲ್ಲಿ ತುಂಬಬೇಕಾಗಿತ್ತು. ಆದರೆ, ವೆಂಕಟಸ್ವಾಮಿ ಆಯೋಗದ ವರದಿ ವಜಾ ಆದ್ದರಿಂದ, ರೋಸ್ಟರ್ ಬದಲಾವಣೆ ಮಾಡಬೇಕಾಗಿ ಬಂದಿದ್ದರಿಂದ ತಡವಾಯಿತು. ಬೇಸಿಗೆ ರಜ ಮುಗಿಯುವುದರೊಳಗೆ ಉಪಾಧ್ಯಾಯರನ್ನು ತುಂಬಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಈ ಮಾನ್ಯ ಸದಸ್ಯರು ತಿಳಿಸಿದ ಕಟ್ಟಡವನ್ನು ನಮ್ಮ ವಶಕ್ಕೆ ತೆಗೆದುಕೊಂಡಿಲ್ಲ ಎನ್ನುವ ಆಕ್ಷೇಪ ಎತ್ತಿದ್ದಾರೆ. ನಮ್ಮ ಅಧಿಕಾರಿಗಳಿಗೆ ಕೂಡಲೇ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

ಶ್ರೀ ಎಸ್.ಎಂ. ಆಡ್ಯಂತಾಯ.— ಮಾನ್ಯ ದೇವೇಗೌಡರು ಇಲ್ಲಿಯೇ ಇದ್ದಾರೆ ಅವರಿಂದ ವಶಕ್ಕೆ ತೆಗೆದುಕೊಳ್ಳಿ.

ಶ್ರೀ ಡಿ. ಮಂಜುನಾಥ್.— ಲೋಕೋಪಯೋಗಿ ಇಲಾಖಾ ಅಧಿಕಾರಿಗಳನ್ನು ನೋಡಿ; ಕಟ್ಟಡ ತೆಗೆದುಕೊಳ್ಳಬೇಕೆಂದು ಬೆಳಿಗ್ಗೆ ಆದೇಶ ಕೊಟ್ಟಿದ್ದೇನೆ.

ಬಿಜಾಪುರ ಜಿಲ್ಲೆಯ ಮೂಂಗಂನೂರು ಮತ್ತು ಇಂಗಳಗಿ ಯಾತ ನೀರಾವರಿ ಯೋಜನೆಗಳ ಬಗ್ಗೆ.

೧೪೦೧. ಶ್ರೀ ಎಸ್. ಜಿ. ನಂಜಯ್ಯನಮಠ್ (ಗುಳೇದ ಗುಡ್ಡ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಮೂಂಗನೂರು ಮತ್ತು ಇಂಗಳಗಿ ಯಾತ ನೀರಾವರಿ ಯೋಜನೆಯಿಂದ ಎಷ್ಟು ಎಕರೆ ನೀರಾವರಿ ಆಗುವುದು ?

ಆ) ಯೋಜನೆಯು ಪೂರ್ಣಗೊಂಡಿದೆಯೇ, ಹಾಗಿದ್ದಲ್ಲಿ ಈ ವರ್ಷ ನೀರಾವರಿಗೆ ನೀರನ್ನು ಬಿಡಲಾಗುವುದೇ ?

ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮೂಂಗನೂರು ಏತ ನೀರಾವರಿ ಯೋಜನೆ ... ೧೩೩೬ ಎಕರೆಗಳು

ಇಂಗಳಗಿ ಏತ ನೀರಾವರಿ ಯೋಜನೆ ... ೭೦೦ ಎಕರೆಗಳು

ಆ) ಮತ್ತು ಇ) ಎರಡೂ ಯೋಜನೆಗಳು ಪೂರ್ಣಗೊಂಡಿವೆ. ಆದರೆ ಪರಿಕ್ಷಾರ್ಥವಾಗಿ ನೀರನ್ನು ಬಿಟ್ಟಾಗ ರೈಸಿಂಗ್ ಮೈಯಿನ್‌ನ ಕೆಲವು ಕೊಳವೆಗಳು ಮತ್ತು ಜಾಯಿಂಟ್‌ಗಳು ಒಡೆದು ಹೋದುದರಿಂದ, ದುರಸ್ತಿ ಕಾರ್ಯಪನ್ನು ಕೈಗೊಳ್ಳಲಾಗಿದ್ದು, ದುರಸ್ತಿ ಕಾರ್ಯವು ಪ್ರಗತಿಯಲ್ಲಿದೆ. ಸಣ ನೀರಾವರಿ, ಮುಖ್ಯ ಇಂಜಿನಿಯರ್ ಅವರನ್ನು ಸ್ಥಳ ಪರೀಕ್ಷೆ ಮಾಡಿ, ಅವಶ್ಯಕ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಕೋರಲಾಗಿದೆ. ಅವರ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಶ್ರೀ ಎಸ್. ಜಿ. ನಂಜಯ್ಯನ ಮಠ್.—ಮಾನ್ಯ ಅಧ್ಯಕ್ಷರೇ, ಹಿರಿಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಈ ಯೋಜನೆಗಳು ೧೯೮೩-೮೪ರಲ್ಲಿ ಪೂರ್ತಿಯಾಗಿವೆ. ಕೇಬಲ್ ಜಗಳದಲ್ಲಿ ಕಂಟ್ರಾಕ್ಟರ್ ಮತ್ತು ಲೋಕೋಪಯೋಗಿ ಇಂಜಿನಿಯರ್‌ಗಳ ನಡುವೆ ವ್ಯಾಜ್ಯ ಪ್ರಾರಂಭವಾಗಿ ಎರಡು ವರ್ಷಗಳು ಮುಗಿಯಿತು. ಕಂಟ್ರಾಕ್ಟ್‌ದಾರರು ಕಳಪೆಯಾದ ಪೈಪುಗಳನ್ನು ಜೋಡಿಸಿದ್ದರಿಂದ, ಪ್ರಾರಂಭ ಮಾಡಿದ ವರ್ಷವೇ ಎಲ್ಲಾ ಪೈಪುಗಳು ಕಿತ್ತುಕೊಂಡು ಹೋಗಿವೆ. ಈ ವಿಚಾರದಲ್ಲಿ ಕಂಟ್ರಾಕ್ಟ್‌ದಾರರು ಬಾಂಡ್ ಕೂಡ ಬರೆದುಕೊಟ್ಟಿದ್ದಾರೆ. ೪೫ ದಿವಸದೊಳಗೆ ತೊಂದರೆಯಾದರೆ, ದುರಸ್ತಿ ಮಾಡಿಕೊಡುವುದಾಗಿ ತಿಳಿಸಿದ್ದರೂ ಇವತ್ತು ೧೪೫ ದಿವಸ ಕಳೆದರೂ ಪೈಪುಗಳನ್ನು ಇನ್ನು ಜೋಡಿಸಿಲ್ಲ. ಈ ವಿಚಾರದಲ್ಲಿ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವಂತೆಯೂ ಕೆಲಸವನ್ನು ಸ್ಪೀಡಪ್ ಆಗಿ ಮಾಡುವಂತೆ ಆದೇಶ ಕೊಡುತ್ತೀರಾ? ೨೦೦೦ ಎಕರೆಗೆ ನೀರು ಉಣಿಸುವ ಈ ಯೋಜನೆಯಿಂದ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಸತ್ಯಾಂಶ ಇದೆ. ೧೯೮೫ನೇ ಇಸವಿ, ೯ನೇ ತಿಂಗಳು, ೩ನೇ ತಾರೀಖು ಈ ಸದನದಲ್ಲಿಯೇ ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಅದರ ಹಿಸ್ಟರಿಯನ್ನೆಲ್ಲಾ ನಾನು ತಮಗೇ ಹೇಳಿದ್ದೇನೆ. ಯಾರೋ ಮಾಡಿದ ತಪ್ಪಿಗೆ ನಾನು ಉತ್ತರ ಕೊಡಬೇಕು. ಇದು ಹಿಂದೆ ನಡೆದಿರುವ ಕೆಲಸ. ಅದನ್ನು ನಾವು ಸರಿಪಡಿಸಬೇಕಾಗಿದೆ. ಇದರ ಕಾಸ್ಟ್‌ನ್ನು ಯಾರಿಂದ ರಿಕವರಿ ಮಾಡಬೇಕು ? ಏನು ಮಾಡಬೇಕು ಎನ್ನುವ ಬಗ್ಗೆ ಕಾಳೂನು ಇದೆ. ಕೆಲಸ ಮಾಡಿದವರು ಮನೆಗೆ ಹೋಗಿರುತ್ತಾರೆ. ಪಿಎಸಿ ಫೈನಾನ್ಸ್ ಡಿಪಾರ್ಟ್